ಕರ್ನಾಟಕ ಸರ್ಕಾರ
(ಸಾರ್ವಜನಿಕ ಶಿಕ್ಷಣ ಇಲಾಖೆ)
ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಬೆಂಗಳೂರು ಉತ್ತರ ವಲಯ-04, ಯಲಹಂಕ ಬೆಂಗಳೂರು-64 ಬೆಂಗಳೂರು ಉತ್ತರ ಜಿಲ್ಲೆ

ನಮೂನೆ-03

(ನಿಯಮ 4 ಉಪನಿಯಮ (6) 3 ರಂತೆ)

ಸಂಖ್ಯೆ: ಸಿ1 ಅನು/ಖಾ.ಶಾ.ಮಾನ್ಯತೆ/73/2020-21 ದಿನಾಂಕ:25-01-2021

ಶ್ರೀ ಬಾಲಾಜಿ ಎಜುಕೇಶನ್ ಟ್ರಸ್ಟ್(ರಿ), ನಂ 1425, 13ನೇ ಕ್ರಾಸ್, ಫೈಪ್ ಲೈನ್ ವೆಸ್ಟ್ಆಫ್ ಕಾರ್ಡ್ ರಸ್ತೆ, ಮಹಾಲಕ್ಷ್ಮಿಪುರಂ, ಬೆಂಗಳೂರು ಈ ಆಡಳಿತ ಮಂಡಳಿಯ ವತಿಯಿಂದ ನಡೆಯುತ್ತಿರುವ **ರೈನ್‌ಬೋ ಇಂಟರ್ ನ್ಯಾಷನಲ್ ಸ್ಕೂಲ್, ನಂ 8, ಕೆರೆಗುಡ್ಡದಹಳ್ಳಿ, ಅಬ್ಬಿಗೆರೆ ಮುಖ್ಯರಸ್ತೆ, ಚಿಕ್ಕಬಾಣಾವರ, ಬೆಂಗಳೂರು-90** ಕರ್ನಾಟಕ ಶಿಕ್ಷಣ ಕಾಯ್ದೆ 1983 (ಕರ್ನಾಟಕ ಆಕ್ಟ್ ಸಂಖ್ಯೆ: 1-1995) ಸೆಕ್ಷನ್ 38 ರಂತೆ ಈ ದಿನದಂದು ತಾತ್ಕಲಿಕ ಮಾನ್ಯತೆ ನೀಡಿದೆ ಎಂದು ಪ್ರಮಾಣೀಕರಿಸಿದೆ.

| | | |
|---|---|---|
| 1. | ನೋಂದಣಿ ಸಂಖ್ಯೆ | 72/2020-21 |
| 2. | ಶಾಲೆಯ ವಿಳಾಸ | **ರೈನ್‌ಬೋ ಇಂಟರ್ ನ್ಯಾಷನಲ್ ಸ್ಕೂಲ್, ನಂ 8, ಕೆರೆಗುಡ್ಡದಹಳ್ಳಿ, ಅಬ್ಬಿಗೆರೆ ಮುಖ್ಯರಸ್ತೆ, ಚಿಕ್ಕಬಾಣಾವರ, ಬೆಂಗಳೂರು-90** |
| 3. | ಈಗಾಗಲೇ ನೀಡಿರುವ ಪ್ರಾವಿಷನಲ್ ಪ್ರಮಾಣ ಪತ್ರದ ಸಂಖ್ಯೆ | **35/2014-15** |
| 4. | ಮಾನ್ಯತೆ ನೀಡಿರುವ ಮಾಧ್ಯಮ | 1 ರಿಂದ 7ನೇ ತರಗತಿ ಆಂಗ್ಲ ಮಾಧ್ಯಮ |
| 5. | ಶಾಲೆ ಅನುದಾನ ಸಹಿತವೇ:ರಹಿತವೇ? | ಅನುದಾನ ರಹಿತವಾಗಿ |
| 6. | ಮಾನ್ಯತೆ ನೀಡಿರುವ ತರಗತಿಗಳು | 1-7ನೇ ತರಗತಿಗೆ ತಲಾ 1 ವಿಭಾಗಕ್ಕೆ |
| 7. | ಭೇಟಿ ನೀಡಿ ಶಿಫಾರಸ್ಸು ಮಾಡಿದ ಅಧಿಕಾರಿ/ನೌಕರರ ಹೆಸರು | ಕ್ಷೇತ್ರ ಶಿಕ್ಷಣಾಧಿಕಾರಿಗಳು, ಉತ್ತರ ವಲಯ-4, ಯಲಹಂಕ, ಬೆಂಗಳೂರು ಉತ್ತರ ಜಿಲ್ಲೆ |

**ಮೇಲ್ಕಂಡ ಶಾಲೆಗೆ 2020-21ನೇ ಸಾಲಿನಿಂದ 2024-25ನೇ ಸಾಲಿನ ವರೆಗೆ( ಐದು ವರ್ಷಕ್ಕೆ) ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಕರ್ನಾಟಕ ಶಿಕ್ಷಣ ಸಂಹಿತೆ ನಿಯಮ 36,6ಬಿ ಯಂತೆ ಶಾಲೆಯು ನಿರಂತರವಾಗಿ ನಡೆಯುತ್ತಿರುವುದರಿಂದ ಮಾನ್ಯತೆ ನವೀಕರಣ ನೀಡಿದೆ.**

ಈ ಪ್ರಮಾಣ ಪತ್ರವನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ಮಾನ್ಯತೆ ನೀಡಿದೆ.

1. ಕರ್ನಾಟಕ ಶಿಕ್ಷಣ ಕಾಯ್ದೆ 1983 ಕರ್ನಾಟಕ ಆಕ್ಟ್ 1 ಆಫ್ 1995 ರ ನಿಯಮಗಳು ಹಾಗೂ ಸರ್ಕಾರಿ ಮತ್ತು ಇಲಾಖೆಯಿಂದ ಕಾಲಕಾಲಕ್ಕೆ ನೀಡುವ ಸುತ್ತೋಲೆ ಹಾಗೂ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಿರಬೇಕು.
2. ಕರ್ನಾಟಕ ಶಿಕ್ಷಣ ಸಂಸ್ಥೆಗಳು, ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯವಸ್ತು ನಿಗಧೀಕರಣ ನಿಯಮಾವಳಿಗಳು 1995 ರ ಸರ್ಕಾರಿ ಅಧಿಸೂಚನೆ ಸಂಖ್ಯೆ: 116 ವಿವಿಧ 95 ದಿನಾಂಕ: 14-11-95 ರ ನಿಯಮ 4, 5, 6 ಮತ್ತು 8 ರನ್ವಯ ರಾಜ್ಯಪಠ್ಯಕ್ರಮ ಶಾಲಾ ಸುರಕ್ಷತೆ ಹಾಗೂ ಮೂಲಭೂತ ಸೌಕರ್ಯಗಳನ್ನು ಹೊಂದಿರತಕ್ಕದ್ದು.
3. ಕರ್ನಾಟಕ ಶಿಕ್ಷಣ ಕಾಯ್ದೆ 1983 ಕರ್ನಾಟಕ ಆಕ್ಟ್ 1 ಆಫ್ 1995 ರ ಕರ್ನಾಟಕ ಶಿಕ್ಷಣ ಸಂಸ್ಥೆಗಳು, ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯವಸ್ತು ನಿಗಧೀಕರಣ ನಿಯಮಾವಳಿಗಳು 1995 ರ ಸರ್ಕಾರಿ ಅಧಿಸೂಚನೆ ಸಂಖ್ಯೆ: ಇಡಿ 116 ವಿವಿಧ 95 ದಿನಾಂಕ: 14-11-95ರ ನಿಯಮ 10 ರಂತೆ ಬೋಧನಾ ಶುಲ್ಕ, ವಿಶೇಷ ಅಭಿವೃದ್ಧಿ ಶುಲ್ಕಗಳನ್ನು ಮಾತ್ರ ವಸೂಲಿ ಮಾಡುತ್ತಿರಬೇಕು ಹಾಗೂ ನಿಯಮ 19 (4) ರಂತೆ ಕ್ರಮ ವಹಿಸಿರಬೇಕು.
4. ಕರ್ನಾಟಕ ಶಿಕ್ಷಣ ಕಾಯ್ದೆ 1983 ಸೆಕ್ಷನ್ 41 (5) ರಂತೆ ಶಾಲೆಯನ್ನು ಮಂಜೂರು ಮಾಡಿರುವ ಮಾಧ್ಯಮದಲ್ಲಿ ಮತ್ತು ಅದೇ ಸ್ಥಳದಲ್ಲಿ ನಡೆಸಿರಬೇಕು. ಅನುಮತಿ ನೀಡಿದ 5 ವರ್ಷಗಳವರೆಗೆ ಶಾಲಾ ಸ್ಥಳಾಂತರ ಮತ್ತು ಹಸ್ತಾಂತರಕ್ಕೆ ಅವಕಾಶವಿರುವುದಿಲ್ಲ. ಸಾಮಾನ್ಯವಾಗಿ ಒಂದು ಸಲ ಮಾತ್ರ ಸ್ಥಳಾಂತರಕ್ಕೆ ಮಾತ್ರ ಅವಕಾಶವಿರುತ್ತದೆ. ಒಂದು ವೇಳೆ ಈ ಅವಧಿಯ ನಂತರ ಸ್ಥಳಾಂತರ/ ಹಸ್ತಾಂತರ ಮಾಡಿಸಲಿಚ್ಚಿಸಿದಲ್ಲಿ ಹೊಸ ಸ್ಥಳದಲ್ಲಿ ಹೊಸದಾಗಿ ನೊಂದಣಿ ಮಾನ್ಯತೆಯನ್ನು ಪಡೆಯತಕ್ಕದ್ದು.
5. ಕರ್ನಾಟಕ ರಾಜ್ಯದ ಸಂಘದ ನೊಂದಣಿ ಕಾಯ್ದೆ 21 1960 ಕ್ರಮ ಸಂಖ್ಯೆ 9 1957 ಅಧಿನಿಯಮ 13 ರ ಪ್ರಕರಣದಂತೆ ಹಿಂದಿನ ಸಾಲಿನವರೆಗಿನ ಲೆಕ್ಕ ಪತ್ರಗಳನ್ನು (ಮಾರ್ಚ 31 ರವರೆಗೆ) ಸಂಘಗಳ ನೊಂದಣಾಧಿಕಾರಿಗಳಿಗೆ ಸಲ್ಲಿಸಿ ದಾಸ್ತಾವೇಜುಗಳನ್ನು ದಾಖಲು ಪಡಿಸಿರಬೇಕು. ಹಾಗೂ ಸದರಿ ಸಂಸ್ಥೆಯ ಕಾರ್ಯಕಾರಿ ಸಮಿತಿ ಸದಸ್ಯರ ಪಟ್ಟಿಯ ದಾಖಲೆಗಳನ್ನು ಅನುಮೋದಿಸಿಕೊಂಡು ಸ್ವೀಕೃತಿ ಹಾಗೂ ಅನುಮೋದನಾ ಪಟ್ಟಿಯನ್ನು ಪರಿಶೀಲನೆಗೆ ಕಾಯ್ದಿರಿಸಬೇಕು.
6. ಶಿಕ್ಷಣ ಕಾಯ್ದೆ 1983 ಸರ್ಕಾರದ ಅಧಿಸೂಚನೆ ಇಡಿ 131 ವಿವಿಧ 98 ದಿನಾಂಕ: 04-11-99 ರ ಮಾನ್ಯತೆ ನಿಯಮ 1999 ರ ನಿಯಮ 5 ಉಪನಿಯಮ 2 ರಂತೆ ಹಾಗೂ ನಿರ್ದೇಶಕರು ಪ್ರೌಢ ಶಿಕ್ಷಣ ರವರ ಸುತ್ತೋಲೆ ಸಂಖ್ಯೆ: ಸಿ8 (4) (7) ಶಾ.ಶಿ.ಅ.ನಿ.ಅ/01/02-03 ದಿನಾಂಕ: 13-12-02 ರ ನಿಯಮಗಳಂತೆ ಸ್ಥಿರನಿಧಿ ಠೇವಣಿಗಳನ್ನು ನಿಗಧಿಪಡಿಸಿರುವ ದರಗಳಲ್ಲಿ ಆಡಳಿತ ಮಂಡಳಿ ಕಾರ್ಯದರ್ಶಿಗಳು ಹಾಗೂ ಸೂಚಿತ ಅಧಿಕೃತ ಪ್ರಾದಿಕಾರದ ಜಂಟಿ ಹೆಸರಿನಲ್ಲಿ ನಿರ್ವಹಿಸಿ ಕಾಲಕಾಲಕ್ಕೆ ನವೀಕರಣ ಮಾಡಿಸಿರಬೇಕು.
7. ಸರ್ಕಾರದ ಆದೇಶ ಸಂಖ್ಯೆ: ಇಡಿ 44 ಎಸ್ ಎಲ್ ಬಿ 2007 ದಿನಾಂಕ: 03-09-2007 ರ ಅನುಬಂಧ 3 ರಲ್ಲಿನ ಚೆಕ್‌ಲಿಸ್ಟ್ ನಂತೆ ಎಲ್ಲಾ ಮಾಹಿತಿ ದಾಖಲೆಗಳನ್ನು ಹೊಂದಿರತಕ್ಕದ್ದು ಹಾಗೂ ಈ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿರತಕ್ಕದ್ದು.
8. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 74 ವಿವಿಧ 2004 ಬೆಂಗಳೂರು ದಿನಾಂಕ: 14-08-2006 ರ ಸೂಚನೆಗಳಂತೆ ಲೆಕ್ಕ ಪತ್ರಗಳ ದಾಖಲೆಗಳನ್ನು ನಿರ್ವಹಿಸಿರಬೇಕು.
9. ಸರ್ಕಾರಿ ಆದೇಶ ಸಂಖ್ಯೆ ಇಡಿ 113 ಎಸ್.ಇ.ಎಸ್ 2005 ಬೆಂಗಳೂರು, ದಿನಾಂಕ 20ನೇ ಮಾರ್ಚ 2005 ರ ಸೂಚನೆಗಳನ್ವಯ ಸದರಿ ಹೆಚ್ಚುವರಿ ವಿಭಾಗಗಳಿಗೆ ಅನುಗುಣವಾಗಿ ಮೂಲಭೂತ ಸೌಕರ್ಯ, ಶಿಕ್ಷಕರ ನೇಮಕಾತಿ ಹಾಗೂ ಇನ್ನಿತರೆ ಎಲ್ಲಾ ಸೌಲಭ್ಯಗಳನ್ನು ಒದಗಿಸಿರಬೇಕು.ಇಲಾಖಾ ನಿಯಮಾನುಸಾರ ನಿಗಧಿತ ಹಾಗೂ ಅರ್ಹ ವಿದ್ಯಾರ್ಹತೆ ಹೊಂದಿರುವ ಶಿಕ್ಷಕರನ್ನು ನೇಮಕಾತಿ ಮಾಡಿಕೊಂಡಿರಬೇಕು. ನಿಯಮಾನುಸಾರ ನಿಗದಿತ ಅರ್ಹತೆ ಹೊಂದದೇ ಇರುವ ಶಿಕ್ಷಕರನ್ನೇನಾದರೂ ನೇಮಕಾತಿ ಮಾಡಿಕೊಂಡಿದ್ದ

ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಕಛೇರಿ,
ಬೆಂಗಳೂರು ಉತ್ತರ ಜಿಲ್ಲೆ ಕೆ.ಜಿ.ರಸ್ತೆ, ಬೆಂಗಳೂರು-2

ನಮೂನೆ-3 (ನಿಯಮ-7)

ಕರ್ನಾಟಕ ಶಿಕ್ಷಣ ಕಾಯಿದೆ ಜಾರಿಗೆ ಬಂದಾಗ ಅಸ್ತಿತ್ವದಲಿಲ್ಲದ್ದ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳ
ತಾತ್ಕಾಲಿಕ ಮಾನ್ಯತೆ ಪ್ರಮಾಣ ಪತ್ರ

ಸಂಖ್ಯೆ:ಅನು6ಎ.ಖಾ.ಪ್ರೌಢ.ಶಾ.ಮಾ.ನವೀ.35/2017-18

ದಿನಾಂಕ:18-08-2017

ಶ್ರೀ ಬಾಲಾಜಿ ಎಜುಕೇಷನ್ ಅಂಡ್ ಚಾರಿಟಬಲ್ ಟ್ರಸ್ಟ್(ರಿ) ಮಹಾಲಕ್ಷ್ಮಿಪುರಂ ಬೆಂಗಳೂರು-86 ಈ ಆಡಳಿತ ಮಂಡಳಿಯ ವತಿಯಿಂದ ನಡೆಯುತ್ತಿರುವ ರೈನ್‌ಬೋ ಆಂಗ್ಲ ಮಾದ್ಯಮ ಪ್ರೌಢಶಾಲೆ ಕೆರೆಗುಡ್ಡದಹಳ್ಳಿ ಚಿಕ್ಕಬಾಣಾವಾರ ಮುಖ್ಯರಸ್ತೆ ಬೆಂಗಳೂರು ಶಾಲೆಗೆ ಈ ಕೆಳಕಂಡ ಷರತ್ತುಗಳನ್ನು ಪೂರೈಸುವ ನಿಬಂಧನೆ ಮೇರೆಗೆ ಶಾಶ್ವತ ಶಾಶ್ವತ ಅನುದಾನ ರಹಿತವಾಗಿ (PERMANENTLY WITHOUT AID) ಕರ್ನಾಟಕ ಶಿಕ್ಷಣ ಸಂಹಿತೆ ನಿಯಮ-36(6)(ಬಿ) ಯಂತೆ ತಾತ್ಕಾಲಿಕವಾಗಿ ಮಾನ್ಯತೆಯನ್ನು ನೀಡಿದೆ.

| ಕ್ರ. ಸಂ | ಮಾನ್ಯತೆ ನವೀಕರಿಸಬೇಕಾದ ವರ್ಷ | ಮಾನ್ಯತೆ ನವೀಕರಿಸಬೇಕಾದ ವಿಭಾಗಗಳು ಮತ್ತು ಮಾಧ್ಯಮ | ಶಾಲೆಯು ಯಾವ ವರ್ಗಕ್ಕೆ ಸೇರಿದೆ | ಶಾಲೆಯ ಮಾನ್ಯತೆ ಬಗ್ಗೆ ಪರಿಶೀಲಿಸಿದ ಅಧಿಕಾರಿಯ ವಿವರ |
|---|---|---|---|---|
| 01 | 2017-18 ಸಾಲಿನಿಂದ 2021-22 ಸಾಲಿನ ರವರೆಗೆ ಶಾಶ್ವತ ಅನುದಾನ ರಹಿತವಾಗಿ (PERMANENTLY WITHOUT AID) ಮಾನ್ಯತೆ ನವೀಕರಿಸಿದೆ. | 8ನೇ ತರಗತಿ-1 ವಿಭಾಗ 9ನೇ ತರಗತಿ-1 ವಿಭಾಗ, 10 ನೇತರಗತಿ-1 ವಿಭಾಗ ಒಟ್ಟು 03 ವಿಭಾಗಗಳಿಗೆ (ಆಂಗ್ಲ ಮಾಧ್ಯಮ) | ಸಾಮಾನ್ಯ | ಶ್ರೀ ನಾರಾಯಣ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಉತ್ತರ ವಲಯ-4 ಬೆಂಗಳೂರು |

ಷರತ್ತುಗಳು:-

1. ಕರ್ನಾಟಕ ಶಿಕ್ಷಣ ಸಂಹಿತೆ ಮತ್ತು ಅನುದಾನ ಸಂಹಿತೆಯ ಎಲ್ಲಾ ನಿಯಮಗಳನ್ನು ಸರ್ಕಾರದ ಹಾಗೂ ಇಲಾಖೆಯ ಅದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.
2. ನೇಮಕಾತಿಗಳನ್ನು ಸರ್ಕಾರಿ ಅದೇಶ ಸಂಖ್ಯೆ:ಇಡಿ.59.ವಿವಿಧ.99,ದಿನಾಂಕ:2/2/2000 ರಂತೆ ಮಾಡಬೇಕಾಗುವುದು. ಶಾಲೆಯ ಸಿಬ್ಬಂಧಿ ರಚನೆಯು ಮೇಲ್ಕಂಡ ಸರ್ಕಾರಿ ಅದೇಶದನ್ವಯ ಇರಬೇಕು. ತರಭೇತಿ ಹೊಂದಿದ ಹಾಗೂ ಇಲಾಖೆಯ ನಿಯಮಗಳ ಪ್ರಕಾರ ನಿಗಧಿತ ವಿಧ್ಯಾರ್ಹತೆ ಹೊಂದಿರುವ ಶಿಕ್ಷಕರನ್ನು ಮಾತ್ರ ನೇಮಿಸಿಕೊಳ್ಳತಕ್ಕದ್ದು ಹಾಗೂ ಬ್ಯಾಂಕ್ ಮೂಲಕವೇ ವೇತನ ನೀಡತಕ್ಕದ್ದು.
3. ಶಾಲೆಯಲ್ಲಿ ನೇಮಕಮಾಡಿಕೊಳ್ಳುವ ಪ್ರತಿಯೊಬ್ಬ ಭೋಧಕ/ಭೋಧಕೇತರ ಸಿಬ್ಬಂಧಿಗೂ ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ.104 ಎಸ್.ಇ.ಪಿ.2005 ದಿ:12-1-2006 ರ ಸೂಚನೆಗಳ ಪ್ರಕಾರ ಸೇವಾಪುಸ್ತಕಗಳನ್ನು ತೆರೆದು ಅದರಲ್ಲಿ ಸೇವಾವಿವರಗಳನ್ನು ನಿಯಮಾನುಸಾರ ದಾಖಲಿಸಿ ನಿರ್ವಹಿಸುವುದು.
4. ಶಾಲೆ ನಡೆಸಲು ಅಗತ್ಯವಾದ ಸ್ಥಳಾವಕಾಶ, ಪೀಠೋಪಕರಣ, ಪಾಠೋಪಕರಣ ಹಾಗೂ ಆಟದ ಮೈದಾನ ಕನಿಷ್ಠ ಮೂಲಭೂತ ಸೌಕರ್ಯ ಒದಗಿಸಬೇಕು.
5. ಶಾಲೆಯಲ್ಲಿ ಸರ್ಕಾರಿ ಆದೇಶದ ಸಂಖ್ಯೆ:ಇಡಿ.59.ವಿವಿಧ.99 ದಿನಾಂಕ:2/2/2000ರ ಅನುಚ್ಛೇಧ-4, ನಿಯಮ-3 ರಂತೆ ವಿಧ್ಯಾರ್ಥಿಗಳ ದಾಖಲಾತಿ, ಹಾಜರಾತಿ ಇರತಕ್ಕದ್ದು.
6. ಇಲಾಖಾ ನಿಯಮದಂತೆ ಮಾತ್ರ ಶುಲ್ಕ ವಸೂಲಿ ಮಾಡುವುದು ಮತ್ತು ಇದರ ಲೆಕ್ಕಪತ್ರಗಳನ್ನು ನಿರ್ವಹಿಸಿ, ಶಾಲೆಯ ಹೆಸರಿನಲ್ಲಿಟ್ಟು ಶಾಲಾ ತನಿಖಾ ಸಮಯದಲ್ಲಿ ಹಾಜರುಪಡಿಸುವುದು. ಹಿಂದಿನ ಸಾಲಿನವರೆಗಿನ ಲೆಕ್ಕಪತ್ರಗಳನ್ನು ನೊಂದಣಾಧಿಕಾರಿಗಳಿಗೆ ಸಲ್ಲಿಸಿ ಸ್ವೀಕೃತಿ ಪ್ರತಿ ಸಲ್ಲಿಸಬೇಕು.
7. ಕರ್ನಾಟಕ ಶಿಕ್ಷಣ ಸಂಹಿತೆ ನಿಯಮಗಳಂತೆ, ಸ್ಥಿರ ನಿಧಿ ಇಡಬೇಕು.
8. ಇಲಾಖೆಯು ನಿರ್ಧರಿಸಿರುವ ಪಠ್ಯಪುಸ್ತಕವನ್ನೇ ಭೋಧಿಸಬೇಕು. ಆಂಗ್ಲ ಮಾಧ್ಯಮ ಶಾಲೆಗಳಲ್ಲಿ ಭಾಷಾ ನೀತಿ ಅನುಸರಿಸಬೇಕು. ಇಲಾಖೆಯ ಪೂರ್ವಾನುಮತಿ ಪಡೆಯದೇ ಹೆಚ್ಚಿನ ತರಗತಿ/ವಿಭಾಗಗಳನ್ನು ತೆರೆಯಬಾರದು.

9. ಶಾಲೆಯ ಮೇಲಿನ ಅಂತಸ್ತುಗಳಿಗೆ ಹೋಗಬೇಕಾದ ಮೆಟ್ಟಿಲುಗಳು ಕಿರಿದು ಆಗಿರಬಾರದು. ಒಂದು ವೇಳೆ ಪ್ರತಿ ಮಜಲುಗಳಲ್ಲಿ ಸುರಕ್ಷಿತ ಗೋಡೆಗಳನ್ನು ನಿರ್ಮಿಸದಿದ್ದಲ್ಲಿ ಅಥವಾ ತುಂಬಾ ಚಿಕ್ಕದಾದ ಗೋಡೆಗಳನ್ನು ನಿರ್ಮಾಣ ಮಾಡಿದ್ದಲ್ಲಿ ಈ ಬಗ್ಗೆ ಜಾಗರೂಕತಾ ಕ್ರಮ ಕೈಗೊಳ್ಳಬೇಕು. ಕೊನೆಯ ಪಕ್ಷ 5 ಅಡಿ ತಡೆ ಗೋಡೆಗಳು ಇರುವಂತೆ ನೋಡಿಕೊಳ್ಳಬೇಕು. ಗಾಳಿ ಬೆಳಕಿನ ವ್ಯವಸ್ಥೆಗೆ ಅಡ್ಡಿ ಉಂಟಾಗದಂತೆ ಗ್ರಿಲ್‌ಗಳನ್ನು ಅಳವಡಿಸಬೇಕು.
10. ಕರ್ನಾಟಕ ಶಿಕ್ಷಣ ಸಂಸ್ಥೆಗಳು (ವರ್ಗೀಕರಣ, ಕ್ರಮಬದ್ಧಗೊಳಿಸುವಿಕೆ ಮತ್ತು ಪಠ್ಯಕ್ರಮದ ನಿಗಧಿಗೊಳಿಸುವಿಕೆ ಇತ್ಯಾದಿ) ನಿಯಮಗಳು-1995 ರಲ್ಲಿ ತಿಳಿಸಿರುವಂತೆ ಮಕ್ಕಳ ಸುರಕ್ಷತೆಬಗ್ಗೆ ಎಲ್ಲಾ ಅಗತ್ಯ ಕ್ರಮಗಳನ್ನು ಹಾಗೂ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವುದು,
11. ಪ್ರಾರ್ಥನೆ ಆದ ಮೇಲೆ ತರಗತಿಗೆ ಮಕ್ಕಳನ್ನು ಕಳುಹಿಸುವಾಗ ' ಹಾಗೂ ಮೇಲಿನ ಅಂತಸ್ತಿಗೆ ಹೋಗುವಾಗ ನೂಕುನುಗ್ಗಲು ಇರಬಾರದು. ಶಾಲೆ ಬಿಟ್ಟಾಗ ಮತ್ತು ಕೊನೆಯ ಬೆಲ್ ಆದ ಮೇಲೂ ಸಹ ಮಕ್ಕಳ ಸುರಕ್ಷತೆಬಗ್ಗೆ ಕ್ರಮವಹಿಸುವುದು. ಶಾಲೆಯ ಸೆಕ್ಯೂರಿಟಿ ಗಾರ್ಡ್‌ಗಳನ್ನು ಈ ಕೆಲಸಕ್ಕೆ ನಿಯೋಜಿಸಿಕೊಳ್ಳಬೇಕು.
12. ಯಾವುದೇ ಸಂದರ್ಭದಲ್ಲೂ ಶಾಲೆಯ ಮಕ್ಕಳು ಶಾಲೆ ಮುಗಿದ ಮೇಲೆ ರಸ್ತೆಗಳನ್ನು ದಾಟುವ ಸಂದರ್ಭಗಳು ಇದ್ದಲ್ಲಿ ದಾಟಿಸಲು ಶಿಕ್ಷಕರಾಗಲೀ ಅಥವಾ ಆಡಳಿತ ಮಂಡಳಿಗಳ ಸೆಕ್ಯೂರಿಟಿಯಾಗಲೀ ಕಡ್ಡಾಯವಾಗಿ ಹಾಜರಿದ್ದು, ಮಕ್ಕಳನ್ನು ದಾಟಿಸಲು ವ್ಯವಸ್ಥೆ ಮಾಡಬೇಕು.
13. ಈಗಾಗಲೇ ಹಲವು ಬಾರಿ ಮಕ್ಕಳನ್ನು ಕರೆ ತರುವ ವಾಹನಗಳಲ್ಲಿ ಸಾರಿಗೆ ನಿಯಮಗಳನ್ನು ಮೀರಿ ನಿಗಧಿತ ಸಂಖ್ಯೆಗಿಂತ ಹೆಚ್ಚಿನ ಮಕ್ಕಳನ್ನು ತುಂಬಿಕೊಂಡು ಬರುವುದನ್ನು ನಿಷೇದಿಸಬೇಕು. ಒಂದು ವೇಳೆ ಆಡಳಿತ ಮಂಡಳಿಯಲ್ಲಿ ಸಾರಿಗೆ ವ್ಯವಸ್ಥೆಯ ಮೇಲೆ ನಿಯಂತ್ರಣ ಇಲ್ಲದಿದ್ದಲ್ಲಿ ನಿಷಿದ್ಧ ಪ್ರಕರಣಗಳ ಬಗ್ಗೆ ಪೋಲಿಸ್ ಇಲಾಖೆಗೆ ದೂರು ನೀಡಬೇಕು.
14. ಮಧ್ಯಂತರ ಅವಧಿಯಲ್ಲಿ ಅಥವಾ ಅನಿರೀಕ್ಷಿತ ಕಾರಣಗಳಿಗಾಗಿ ಶಾಲೆ ಬಿಡುವ ಸಂದರ್ಭಗಳಲ್ಲಿ ಮಕ್ಕಳ ಚಲನವಲನಗಳ ಮೇಲೆ ನಿಗಾ ಇಡುವಲ್ಲಿ ಕ್ರಮಕೈಗೊಳ್ಳಬೇಕು.ಮಕ್ಕಳು ಆಟ ಆಡುವಾಗ ಕಡ್ಡಾಯವಾಗಿ ಉಸ್ತುವಾರಿ ಮಾಡುವ ವ್ಯವಸ್ಥೆ ಶಾಲೆಯಲ್ಲಿ ಇರಬೇಕು.
15. ಶಾಲಾ ಮಕ್ಕಳಿಗೆ ಯಾವುದೇ ದೈಹಿಕ ದಂಡನೆಗಳನ್ನು ನೀಡಬಾರದು.
16. ಅಗ್ನಿ ನಂದಕವನ್ನು ಶಾಲೆಯಲ್ಲಿ ಕಡ್ಡಾಯವಾಗಿ ಅಳವಡಿಸಬೇಕು.
17. ಶಾಲಾ ಆವರಣದ 100 ಯಾರ್ಡ್ ಸುತ್ತಳತೆಯಲ್ಲಿ ಯಾವುದೇ ತಂಬಾಕುಯುಕ್ತ ವಸ್ತುಗಳ ಸೇವನೆ ಹಾಗೂ ಮಾರಾಟವನ್ನು ನಿಷೇಧಿಸಿರುವ ಬಗ್ಗೆ ಕಡ್ಡಾಯವಾಗಿ ನಾಮ ಫಲಕವನ್ನು ಕಡ್ಡಾಯವಾಗಿ ಹಾಕಿರಬೇಕು.
18. ಶಾಲಾ ವಾಹನಗಳ ಸುರಕ್ಷತೆಯ ಬಗ್ಗೆ ಇಲಾಖೆ ನಿಯಮಾನುಸಾರ ಅಗತ್ಯ ಕ್ರಮಕೈಗೊಳ್ಳಬೇಕು.
19. ಇತ್ತೀಚಿನ ಸರ್ಕಾರದ ಆದೇಶದಂತೆ ಮಕ್ಕಳ ಸುರಕ್ಷತೆ ಬಗ್ಗೆ ಕ್ರಮ ವಹಿಸುವುದು ಹಾಗೂ ಶಾಲೆಯಲ್ಲಿ ಕಡ್ಡಾಯವಾಗಿ ಸಿ.ಸಿ.ಟಿ.ವಿ ಅಳವಡಿಸುವುದು

(ಅಬ್ದುಲ್ ವಾಜಿದ್ ಖಾಜಿ)
ಉಪನಿರ್ದೇಶಕರು(ಆಡಳಿತ)

<u>ಪ್ರತಿಗಳು:-</u>

1) ಕ್ಷೇತ್ರಶಿಕ್ಷಣಾಧಿಕಾರಿಗಳು, ಸಾ.ಶಿ.ಇಲಾಖೆ, ಉತ್ತರ ವಲಯ-04, ಯಲಹಂಕ ಬೆಂಗಳೂರು
2) ಕಾರ್ಯದರ್ಶಿಗಳು ಶ್ರೀ ಬಾಲಾಜಿ ಎಜುಕೇಷನ್ ಅಂಡ್ ಚಾರಿಟಬಲ್ ಟ್ರಸ್ಟ್(ರಿ) ಮಹಾಲಕ್ಷ್ಮಿಪುರಂ ಬೆಂಗಳೂರು-86.
3) ಮುಖ್ಯ ಶಿಕ್ಷಕರು ರೈನ್‌ಬೋ ಆಂಗ್ಲ ಮಾದ್ಯಮ ಪ್ರೌಢಶಾಲೆ ಕೆರೆಗುಡ್ಡದಹಳ್ಳಿ ಚಿಕ್ಕಬಾಣಾವಾರ ಮುಖ್ಯರಸ್ತೆ ಬೆಂಗಳೂರು
4) ಕಛೇರಿ ಪ್ರತಿ